11

# ಸೆರೆಯಲ್ಲಿದ್ದ ಕಾಲಾವಧಿ

## ಯೆರೂಸಲೇಮಿನ ಪತನದಿಂದ ಜೆರುಬ್ಬಾಬೆಲನ ನೇತೃತ್ವದಲ್ಲಿ ಹಿಂದಿರುಗುವಿಕೆಯ ವರೆಗೆ

## ಕ್ರಿ.ಪೂ. 586-536

**ಪೀಠಿಕೆ.**-*ಪುನರಾವಲೋಕನ ಮತ್ತು ಸಾರಾಂಶ.*-ಈಗ ನಾವು ಮಾನವನ, ಪಾಪದ ಮತ್ತು ವಿಮೋಚನೆಯ ಮೊದಲಿನ ಹಂತಗಳ ಚರಿತ್ರೆಯನ್ನು ಗುರುತಿಸಿದ್ದೇವೆ, ಅಬ್ರಹಾಮನ ಕರೆಯುವಿಕೆಯಿಂದ ಯಶಸ್ವೀ ಅವಧಿಗಳ ಮುಖಾಂತರ ಹದಿನೈದು ನೂರು ವರ್ಷಗಳವರೆಗಿನ ಆಯ್ದುಕೊಂಡ ಜನಾಂಗದ ಅದೃಷ್ಟಗಳನ್ನು ಹಿಂಬಾಲಿಸಿದ್ದೇವೆ: ಪಿತೃಗಳ ಕಾಲ, ದಾಸತ್ವ ಸಂಚಾರಗಳು, ಜಯಗಳು, ನ್ಯಾಯಸ್ಥಾಪಕರು, ಸಂಯುಕ್ತ ರಾಜ್ಯ, ಎರಡು ರಾಜ್ಯ ಮತ್ತು ಯೆಹೂದ ರಾಜ್ಯ ಮಾತ್ರ. ದಾವೀದ ಮತ್ತು ಸೊಲೊಮೋನನ ದಿನಗಳಲ್ಲಿ ರಾಷ್ಟ್ರ ಜೀವನದ ಮಹಿಮೆಯುಳ್ಳ ಪ್ರಗತಿಯನ್ನು ಅನಂತರದ ವಿಭಜನೆಯನ್ನು ಮತ್ತು ಅವನತಿಯನ್ನು ನೋಡಿದ್ದೇವೆ.

ಉತ್ತರ ರಾಜ್ಯದ ರಾಜಕೀಯ ಕತ್ತಲೆಯಲ್ಲಿ ಮತ್ತು ಆತ್ಮಿಕ ರಾತ್ರಿಯಲ್ಲಿ ಅಧೋಗತಿಗಿಳಿಯಿತು, ಒಂದನೂರ ನಾಲ್ವತ್ತು ವರ್ಷಗಳ ಯೋಗ್ಯ ಜೀವನದ ನಂತರ ಯೂದಾಯವು ಮುರಿಯಲ್ಪಟ್ಟಿತು, ಯೆರೂಸಲೇಮ ಹಾಳುದಿಬ್ಬವಾಯಿತು, ಮತ್ತು ಅರಸ ಹಾಗೂ ಜನರು ಏಳುನೂರು ಮೈಲು ದೂರದಲ್ಲಿದ್ದ ಬಬಿಲೋನಿಗೆ ಒಯ್ಯಲ್ಪಟ್ಟರು, ಸಹಾಯ ಹೀನ ಸೆರೆವಾಸದಲ್ಲಿ ಇಡಲ್ಪಟ್ಟರು. ಪ್ರತಿಯೊಂದು ಕಡೆಯಲ್ಲಿ ಕ್ರೂರತ್ವ, ಬಲವಾದ ಮೂಢನಂಬಿಕೆ ಮತ್ತು ವಿಗ್ರಹಾರಾಧನೆಗಳು ಪ್ರಬಲವಾಗಿ ಬೆಳೆದವು, ಎಲ್ಲಾ ಮಾನವ ನೋಟಕ್ಕೆ, ಮಾನವನ ವಿಮೋಚನೆಯ ಪ್ರಯೋಗವು ಸೋಲಾಗಿರುತ್ತದೆ; ದೇವರ ಜ್ಞಾನವು ಎಂದೆಂದಿಗೂ ಕಳೆದು ಹೋಗುತ್ತದೆ. ಆದರೆ ಅದು ಪ್ರಯೋಗವಾಗಿರಲಿಲ್ಲ. ಅಂಧಕಾರದ ರಾತ್ರಿಯೊಳಗಿಂದ ನಿರೀಕ್ಷೆಯ ಅತೀ ಪ್ರಕಾಶಮಾನವಾದ ನಕ್ಷತ್ರ ಉದಯವಾಯಿತು, ಅದು ಉತ್ತರ ರಾಜ್ಯದ ಪತನವಾದನಂತರ, ಹಾಗೂ ಯೆಹೊದದ ಪತನ ಮತ್ತು ಸೆರೆಗೆ ಹೋದನಂತರ, ಮೀಕ, ಯೆಶಾಯ, ಯೆರೆಮೀಯ, ದಾನಿಯೇಲ ಮತ್ತು ಜೆಕರ್ಯರಂಥ ಪ್ರವಾದಿಗಳು ಕ್ರಿಸ್ತನ ಆಗಮನದ ಮತ್ತು ಆತನ ಜಾಗತಿಕ ಆತ್ಮಿಕ ಆಳ್ವಿಕೆಯ ಬರೋಣದ ಬಗ್ಗೆ ತಮ್ಮ ಶ್ರೇಷ್ಠವಾದ ಪ್ರವಾದನೆಗಳನ್ನು ಬರೆದರು, ಹಿಬ್ರೂ ದೇವಾಧಿಪತ್ಯವು ಶುದ್ಧವಾಗಿ ಆತ್ಮಿಕ ರಾಜ್ಯದ ಮುಳ್ಳಿನ ಕಾಂಡವಾಗಿದ್ದು, ಹೂವುಗಳನ್ನೂ ಹಣ್ಣುಗಳನ್ನೂ ಪೂರ್ತಿಗೊಳಿಸಲಿಕ್ಕಿರುವುದು ಎಂಬುದು ಮೊಬ್ಬಾಗಿ ಭಾವಿಸಲು ಪ್ರಾರಂಭಿಸಿತು ಹೂವು ಅರಳುವವರೆಗೆ, ಮುಳ್ಳಿನ ಕಾಂಡವು ನಿಂತುಕೊಳ್ಳ ತಕ್ಕದ್ದು. ಆದುದರಿಂದ, ಚದರಿಹೋದವರು ಮತ್ತು ಸೆರೆಯಾಗಿ ಹೋದವರು ಇದ್ದರೂ, ಯೂದಾಯಕ್ಕೆ, ಜನಾಂಗಿಕ ಜೀವನದ ಹಿಂದಿರುಗುವಿಕೆಯೂ ನವೀಕರಣವೂ ಅಗತ್ಯವಾಗಿತ್ತು.

ಯೆಶಾಯ, ಮೀಕ, ಹುಲ್ದ ಮತ್ತು ಯೆರೆಮೀಯರಂಥ[1] ಪ್ರವಾದಿಗಳಿಂದ ಸೆರೆಯ

ವಾಸವು ಮೇಲಿಂದ ಮೇಲೆ ಮುಂತಿಳಿಸಲ್ಪಟ್ಟಿತ್ತು; ಈ ಪ್ರವಾದನೆಗಳು ಅರುಹು ಇಲ್ಲವೇ ನೆಬೂಕದ್ನೆಚ್ಚರನಿಂದ ಅವನು ಯಶಸ್ವಿಯಾಗಿ ಯೆರೂಸಲೇಮನ್ನು ವಶಪಡಿಸಿಕೊಂಡದ್ದ ರಲ್ಲಿಯೂ ಯೆಹೂದಿ ಜನರನ್ನು ಸೆರೆಯಾಗಿ ತೆಗೆದು ಹೋದದ್ದರಲ್ಲಿಯೂ ನೆರವೇರಿದವು.

**1. ಯೆರೆಮೀಯ ಮತ್ತು ಐಗುಪ್ತದಲ್ಲಿ ಸೆರೆಯಾಗಿದ್ದದ್ದು** (2 ಅರಸುಗಳು 25:22-26; ಯೆರೆಮೀಯನ 40-44) - ಯೆರೂಸಲೇಮಿನ ನಾಶನದ ನಂತರ, ಹೊಲಗಳನ್ನು ದ್ರಾಕ್ಷೆತೋಟಗಳನ್ನೂ ಮಾಡುವವರನ್ನೊಳಗೊಂಡ ಅಲ್ಪ ಸಂಖ್ಯೆಯಲ್ಲಿ ಜನರು ಅಲ್ಲಿ ಉಳಿದುಕೊಂಡರು, ಯೆರೆಮೀಯನು ತಾನು ಪ್ರೀತಿಸಿದ ನೆಲದ ಹಾಳುದಿಬ್ಬಗಳ ಮಧ್ಯದಲ್ಲಿ ಇರುವುದನ್ನು ಅಪೇಕ್ಷಿಸಿ, ಬಬಿಲೋನಿಗೆ ಸುರಕ್ಷಿತವಾಗಿ ಒಯ್ಯಲ್ಪಡುವುದನ್ನು ನಿರಾಕರಿಸಿದನು. ಆದರೆ ಉಳಿದುಕೊಂಡಿದ್ದ ಜನರು ತಮ್ಮ ತಮ್ಮಲ್ಲಿಯೇ ಜಗಳವಾಡಿ ಕೊಂಡರು. ಅವರ ದೇಶಾಧಿಪತಿ, ಗೆದಲ್ಯನು, ಇಷ್ಮಾಯೇಲನ ನೇತೃತ್ವದಲ್ಲಿ ಯೆಹೂದಿ ಒಳಸಂಚುಗಾರರ ಗುಂಪಿನಿಂದ ಕೊಲೆ ಮಾಡಲ್ಪಟ್ಟನು. ಉಳಿದವರು, ನೆಬುಕದ್ನೆಚ್ಚರನ ಪ್ರತೀಕಾರಕ್ಕೆ ಭಯಪಟ್ಟು, ಯೋಹನ್ನಾನನ ನಾಯಕತ್ವದಲ್ಲಿ ಐಗುಪ್ತಕ್ಕೆ ಓಡಿ ಹೋದರು. ಐಗುಪ್ತಕ್ಕೆ ವಲಸೆ ಹೋಗುವುದರ ಬಗ್ಗೆ ಯೆರೆಮೀಯನು ಯಥಾರ್ಥವಾದ ವಿರೋಧವನ್ನು ವ್ಯಕ್ತಪಡಿಸಿದನು ಆದರೆ ಪ್ರೀತಿಯ ಹಳೇ ನಾಡನ್ನು ಬಿಟ್ಟು ಐಗುಪ್ತಕ್ಕೆ ಸೆರೆಯವ ರೊಂದಿಗೆ ಹೋಗಲು ಒತ್ತಾಯಿಸಲ್ಪಟ್ಟನು. ಅಲ್ಲಿ, ತಫಾನೆಸ್ ಪ್ರಸಿದ್ಧ ಪಟ್ಟಣದಲ್ಲಿ ಮಹಾ ಪ್ರವಾದಿಯು ತನ್ನ ಕೊನೆಯ ಪ್ರವಾದನೆಯನ್ನು ಬರೆದನು. ಪುರಾತನ ಕ್ರೈಸ್ತ ಸಂಪ್ರದಾಯದ ಪ್ರಕಾರವಾಗಿ, ಅವನು ತನ್ನ ಜೊತೆ ಸೆರೆಯಾಳಿನಿಂದ ಕೊಲೆಮಾಡಲ್ಪಟ್ಟನು; ಯೆಹೂದಿ ಸಾಂಪ್ರದಾಯದ ಪ್ರಕಾರವಾಗಿ ಅವನು ಐಗುಪ್ತದಿಂದ ತಪ್ಪಿಸಿಕೊಂಡು ಬಬಿಲೋನಿಗೆ ಹೋದನು, ಆದರೆ ಇದರಲ್ಲಿ, ಇತರ ಅನೇಕ ಉದಾಹರಣೆಗಳಲ್ಲಿಯಂತೆ, ಯೆಶಾಯ, ಯೆಹೆಜ್ಕೇಲ, ದಾನಿಯೇಲ, ಪೇತ್ರ, ಪೌಲ ಮತ್ತು ಯೋಹಾನರೊಂದಿಗಿನಂತೆ, ಇವನ ಬರಹಗಳಿಂದ ಪರಿಶುದ್ಧ ಬರಹಗಳು ಸಮೃದ್ಧಿಗೊಂಡಿರುತ್ತವೆ, ಅವುಗಳು ಅವನ ಜೀವನದ ಮುಕ್ತಾಯದ ದೃಶ್ಯಗಳ ಬಗ್ಗೆ ಮೌನವಾಗಿವೆ. ಐಗುಪ್ತಕ್ಕೆ ಸೆರೆಹೋದವರು ಹಿಂದಿರುಗಿ ಬಂದದ್ದರ ಬಗ್ಗೆ ಯಾವುದೇ ವರದಿ ಇರುವದಿಲ್ಲ.

**2. ದಾನಿಯೇಲ ಮತ್ತು ಬಬಿಲೋನಿಯದಲ್ಲಿ ಮೊದಲನೆಯ ಸೆರೆಯವಾಸ** (2 ಅರಸುಗಳು 24:1; 2 ಪೂರ್ವಕಾಲವೃತ್ತಾಂತ 36:5-8; ದಾನಿಯೇಲ 1-12).-ನೆಬೂಕದ್ನೆಚ್ಚರನು ಯೂದಾಯದ ಮೇಲೆ ಮೂರು ದಾಳಿಗಳನ್ನು ಮಾಡಿದನೆಂದು ನೋಡಿದ್ದೇವೆ. ಮೊದಲನೆಯದರಲ್ಲಿ (ಕ್ರಿ.ಪೂ. 606) ರಾಜವಂಶದ ನಾಲ್ಕು ಜನ ಯುವಕರನ್ನು - ದಾನಿಯೇಲ, ಶದ್ರಾಕ್, ಮೇಶಾಕ್, ಮತ್ತು ಅಬೇದ್‌ನೆಗೋರನ್ನು ತೆಗೆದುಕೊಂಡು ಹೋದನು, ಅರಸನ ರಾಜಗೃಹದಲ್ಲಿ ಗೌರವದಿಂದ ಅವರು ಶಿಕ್ಷಣ ಹೊಂದಿದರು, ಆದರೆ ಬೇಗನೇ ಬಬಿಲೋನಿನ ಐಶಾರಾಮಕ್ಕೆ ಮತ್ತು ಬಬಿಲೋನಿನ ವಿಗ್ರಹಾರಾಧನೆಗೆ ವಿರೋಧವಾಗಿ ನಿಲ್ಲುವುದರಿಂದ ತಮ್ಮನ್ನು ಭಿನ್ನವಾಗಿಟ್ಟುಕೊಂಡಿದ್ದರು.

*a. ನೆಬೂಕದ್ನೆಚ್ಚರನ ಕನಸು.*-ಬಂಗಾರದ ತಲೆ, ಬೆಳ್ಳಿಯ ಎದೆ, ಹಿತ್ತಾಳಿಯ ತೊಡೆಗಳ ಮತ್ತು ಕಬ್ಬಿಣದ ಕಾಲುಗಳ ದೊಡ್ಡ ಮೂರ್ತಿಯ ನೆಬೂಕದ್ನೆಚ್ಚರನ ಕನಸನ್ನು ವ್ಯಾಖ್ಯಾನಿಸುವುದರಿಂದ ಮೊದಲು ದಾನಿಯೇಲನು ಗಮನಕ್ಕೆ ಬಂದನು, ದಾನಿಯೇಲ ನಿಂದ ವ್ಯಾಖ್ಯಾನಿಸಲ್ಪಟ್ಟಂತೆ, ತಲೆಯು ನೆಬೂಕದ್ನೆಚ್ಚರನನ್ನು ಮತ್ತು ಬಬಿಲೋನ ಸಾಮ್ರಾಜ್ಯವನ್ನು ಪ್ರತಿನಿಧೀಕರಿಸಿತು; ಇತರ ಭಾಗಗಳು ಅವನ ನಂತರ ಬರುವ ದೊಡ್ಡ ಸಾಮ್ರಾಜ್ಯಗಳನ್ನು ಪ್ರತಿನಿಧೀಕರಿಸಿದವು.

*b. ಬೆಂಕಿಯಲ್ಲಿ ಮೂರು ಜನರು.*-ತನ್ನ ಕನಸಿನ ನಂತರ, ನೆಬೂಕದ್ನೆಚ್ಚರನು ಗರ್ವದಿಂದ ಉಬ್ಬಿ ಹೋದನು. ಅವನು ಒಂದು ದೊಡ್ಡ ಮೂರ್ತಿಯನ್ನು ಮಾಡಿಸಿ

ನಿಲ್ಲಿಸಿದನು. ಪ್ರತಿಯೊಬ್ಬರೂ ಅಡ್ಡಬಿದ್ದು ಅದನ್ನು ಆರಾಧಿಸಬೇಕೆಂದು ಆಜ್ಞಾಪಿಸಿದನು. ಶದ್ರಾಕ್, ಮೇಶಾಕ್, ಅಬೇದ್‌ನೆಗೋ ಅವರಿಗೆ ತಮ್ಮ ನಂಬಿಕೆಗಳ ಬಗ್ಗೆ ಧೈರ್ಯವಿದ್ದುದರಿಂದ, ಅದನ್ನ ನಿರಾಕರಿಸಿದರು. ಅದಕ್ಕೆ ದಂಡನೆಯಾಗಿ, ಅವರು ಬೆಂಕಿಯ ಆವಿಗೆಯಲ್ಲಿ ಎಸೆಯಲ್ಪಟ್ಟರು, ಆದರೆ ಅದ್ಭುತಕರವಾಗಿ ಕಾಪಾಡಲ್ಪಟ್ಟರು.

*c. ದಾನಿಯೇಲನ ದರ್ಶನ.*-ಒಂದರ ನಂತರ ಒಂದು ಬಂದ ಜಾಗತಿಕ ಸಾಮ್ರಾಜ್ಯಗಳ ಬಗ್ಗೆ ದಾನಿಯೇಲನಿಗೆ ವಿವಿಧ ದರ್ಶನಗಳಾದವು: ಬಬಿಲೋನಿಯನ್, ಪರ್ಶಿಯನ್, ಮಕೆದೋನಿಯನ್, ರೋಮನ್ ಮತ್ತು ದೇವರು ಸ್ಥಾಪಿಸುವ ಒಂದು ರಾಜ್ಯವು ಇಡೀ ಭೂಲೋಕವನ್ನು ತುಂಬಿಕೊಳ್ಳುವುದು ಮತ್ತು ಸದಾಕಾಲಕ್ಕೂ ನಿಂತುಕೊಳ್ಳುವುದು.

*d. ದಾನಿಯೇಲನು ಸಿಂಹಗಳ ಗವಿಯಲ್ಲಿ.*-ಪರ್ಷಿಯದ ಮೇಲೆಳುತ್ತಿರುವ ಬಲದ ಮುಂದೆ ಬಬಿಲೋನು ಕೆಳಗಿಳಿಯುತ್ತಿರುವುದನ್ನು ನೋಡಲು ದಾನಿಯೇಲನು ಜೀವಿಸಿದನು. ಅವನ ಆಜ್ಞಾಪಿಸುವ ಸಾಮರ್ಥ್ಯಗಳು ಪರ್ಷಿಯನ್ ಅಧಿಕಾರಿಗಳ ಅಸೂಯೆಗೆ ಬಲಿಯಾದವು, ಮತ್ತು ಅವನ ಅನುದಿನದ ಪ್ರಾರ್ಥನೆಯಲ್ಲಿಯ ನಿಷ್ಠೆಗಾಗಿ ಅವನನ್ನು ಅವರು ಸಿಂಹಗಳಿಗೆ ಎಸೆಯುವಂತೆ ಮಾಡಿದರು. ಆದರೆ ಅವನು ದೈವಿಕ ನಡಿಸುವಿಕೆಯಂತೆ ಉಳಿಸಲ್ಪಟ್ಟನು.

**3. ಯೆಹೆಜ್ಕೇಲನು ಮತ್ತು ಎರಡನೆಯ ಬಬಿಲೋನಿನ ಸೆರೆಯವಾಸ** (2 ಅರಸುಗಳು 24:8-16; 2 ಪೂರ್ವಕಾಲವೃತ್ತಾಂತ 36:9, 10; ಯೆಹೆಜ್ಕೇಲ 1:1, 2).-ತನ್ನ ಎರಡನೆಯ ದಾಳಿಯಲ್ಲಿ (ಸುಮಾರು ಕ್ರಿ.ಪೂ. 597), ನೆಬೂಕದ್ನೆಚ್ಚರನು ಹತ್ತು ಸಾವಿರ ಜನರನ್ನು ಸೆರೆಯಾಗಿ ಒಯ್ದನು, ಅವರಲ್ಲಿ ಪ್ರವಾದಿ ಯೆಹೆಜ್ಕೇಲನು ಇದ್ದನು. ಅವರು ಖೇಬಾರ ನದಿಯ ಬಳಿಯಲ್ಲಿ ನೆಲೆಗೊಳಿಸಲ್ಪಟ್ಟರು. ಇದು ಬಬಿಲೋನಿನ ಮುನ್ನೂರು ಮೈಲುಗಳ ಮೇಲೆ ಯೂಫ್ರೇಟೀಸದಲ್ಲಿ ಕೂಡುತ್ತದೆ. ಅವರಲ್ಲಿ ಸುಳ್ಳು ಪ್ರವಾದಿಗಳು ಎದ್ದರು, ತ್ವರಿತವಾಗಿ ಹಿಂದಿರುಗುವುದರ ಬಗ್ಗೆ ವಾಗ್ದಾನ ಮಾಡಿದರು. ಯೆರೆಮೀಯನು ಅವರಿಗೆ ಯೆರೂಸಲೇಮಿನಿಂದ ಒಂದು ಪತ್ರ ಬರೆದನು, ಸೆರೆವಾಸವು ಎಪ್ಪತ್ತು ವರ್ಷಗಳ ವರೆಗೆ ಇರುವುದೆಂದು ಬರೆದನು (ಕ್ರಿ.ಪೂ. 606, ಮೊದಲನೆಯ ಸೆರೆಗೆ ಒಯ್ಯಲ್ಪಟ್ಟದ್ದರಿಂದ ಎಣಿಸಿ). ಹಾಗೂ ಮನೆಗಳನ್ನು ಕಟ್ಟಿಕೊಳ್ಳಲು ತೋಟಗಳನ್ನು ಮಾಡಲು ಅವರಿಗೆ ಉಪದೇಶಮಾಡಿದನು (ಯೆರೆಮೀಯ 29). ಖೆಬಾರ ನದಿಯ ಬಳಿಯಲ್ಲಿ ಯೆಹೆಜ್ಕೇಲನು ತನ್ನ ಪುಸ್ತಕವನ್ನು ಬರೆದನು ಅದು ಅವನ ದರ್ಶನಗಳನ್ನು ಒಳಗೊಂಡಿರುತ್ತದೆ; ಇದೇ ಸಮಯದಲ್ಲಿ "ಬಬಿಲೋನಿನ ನದಿಗಳ ಪಕ್ಕದಲ್ಲಿ," ಎಂದು ಪ್ರಾರಂಭವಾಗುವ 137ನೆಯ ಕೀರ್ತನೆಯು ಬರೆಯಲ್ಪಟ್ಟಿತು.

---

ಟಿಪ್ಪಣಿ

[1]ನೋಡಿರಿ 2 ಅರಸುಗಳು 20:17; 21:10-15; 22:14-17; ಯೆರೆಮೀಯ 25:9-11; 34:2, 3; ಮೀಕ 3:8-12.

© 2009 Truth for Today